ಗೊರೂರು ಗ್ರಾಮದ ಜನರಿಗೆ ಕುಡಿಯುವ ನೀರು

794 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗೊರೂರು ಗ್ರಾಮದ ಜನರಿಗೆ ಕುಡಿಯುವ ನೀರೊದಗಿಸಲು ಕಾರ್ಯಗತವಾಗಿರುವ ಯೋಜನೆಯಿಂದ ಕುಡಿಯಲು ಯೋಗ್ಯವಲ್ಲದ ಗಡಸು ನೀರು ಸರಬರಾಜಾಗುತ್ತಿದ್ದು ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಆ) *ಗೊರೂರು ಗ್ರಾಮದ ನೀರಾವರಿ ಕಾಲೋನಿಗೆ ಕುಡಿಯುವ ನೀರು ಒದಗಿಸಲು ಕಾರ್ಯಗತವಾಗಿರುವ ಯೋಜನೆಯಿಂದ ಪಕ್ಕದಲ್ಲೇ ಇರುವ ಗೊರೂರು ಗ್ರಾಮದ ಜನರಿಗೆ ಕುಡಿಯುವ ನೀರು ಒದಗಿಸುವಂತೆ ಮನವಿ ಸಲ್ಲಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಸದರಿ ಗ್ರಾಮಕ್ಕೆ ಕುಡಿಯುವ ನೀರು ಒದಗಿಸದಿರಲು ಕಾರಣಗಳೇನು?*

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ದೂರು ಬಂದಿದೆ.

ಆ) ಹೌದು.

ಇ) ಸದರಿ ಗ್ರಾಮಕ್ಕೆ ಹೇಮಾವತಿ ನೀರನ್ನು ಕುಡಿಯುವ ಸಲುವಾಗಿ ನೀರಾವರಿ ಇಲಾಖೆಯು ಒದಗಿಸುತ್ತದೆ. ಆದರೆ, ಗ್ರಾಮಕ್ಕೆ ನೀರಾವರಿ ಇಲಾಖೆಯು ಕೊಡುವ ನೀರನ್ನು ಸರಬರಾಜು ಮಾಡುವ ವ್ಯವಸ್ಥೆಯು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯು ಮಾಡಿಕೊಳ್ಳಬೇಕು.

ಹಾಸನದ ಗೊರೂರು ಡ್ಯಾಂ ಮಧ್ಯದ ರಸ್ತೆ ದುರಸ್ತಿ

795 - ಶ್ರೀ. ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ಗೊರೂರು ಡ್ಯಾಂ ಮಧ್ಯದ 18 ಕಿ.ಮೀ. ಉದ್ದದ ರಸ್ತೆಯು ಹದಗೆಟ್ಟಿರುವುದರಿಂದ ತುಂಬಾ ತೊಂದರೆಯುಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ರಸ್ತೆಯನ್ನು ದುರಸ್ತಿ ಮಾಡದಿರಲು ಕಾರಣಗಳೇನು?*

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಹೌದು.

ಆ) ಸದರಿ ರಸ್ತೆಯು ಮೂಲತಃ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ರಸ್ತೆಯಾಗಿದ್ದು ಹೇಮಾವತಿ ಆಣೆಕಟ್ಟಿನ ನಿರ್ಮಾಣ ಸಮಯದಲ್ಲಿ ನೀರಾವರಿ ಇಲಾಖೆಯು ಈ